ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎ.ಸಿ.ಜೆ.ಎಂ. ನ್ಯಾಯಾಲಯ,
ಉಡುಪಿ.

ಸಿ.ಸಿ.:2172/2023
ಸಿ.ಡಬ್ಲ್ಯು 1 ಪಿ.ಡಬ್ಯೂ :4

| | |
|---|---|
| ಸಾಕ್ಷಿದಾರರ ಹೆಸರು | ತಿಲಕಚಂದ್ರ ಕೆ. |
| ತಂದೆಯ ಹೆಸರು | ರಾಮಣ್ಣ |
| ವಯಸ್ಸು | 68 ವರ್ಷ |
| ಉದ್ಯೋಗ | ನಿವೃತ್ತ ಪೊಲೀಸ ಉಪಾದೀಕ್ಷಕರು |
| ವಾಸಸ್ಥಳ | ಮಂಗಳೂರು |

ದಿನಾಂಕಃ 03-07-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕ ರವರಿಂದಃ

ನಾನು 02-02-2004 ರಿಂದ 25-09-2006 ರವರೆಗೆ ಮಂಗಳೂರು ಜಿಲ್ಲಾ ಅಪರಾಧ ಗುಪ್ತ ದಳದಲ್ಲಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ ದಿಃ 12-08-2005 ರಂದು ಮೂಡಬಿದ್ರಿ ಠಾಣಾ ಮೆಕದ್ದಮೆ ಸಂಖ್ಯೆ 111/2005 ರಲ್ಲಿ ಆರೋಪಿಯಾಗಿದ್ದ ಮುತ್ತಪ್ಪ ಎಂಬವರನ್ನು ವಶಕ್ಕೆ ಪಡೆದುಕೊಂಡಿದ್ದೆನು. ಆತನ ಮಾಹಿತಿಯ ಮೆರೆಗೆ ಅದೇ ದಿನ ಸಂಜೆ 7.00 ಗಂಟೆಗೆ ಮಂಗಳೂರು ಕೆಎಸ್ ಆರ್ ಟಿಸಿ ಬಸ್ ಸ್ಟಾಂಡ್ ಬಳಿ ಹಳೆಯ ಪ್ರಕರಣದ ಕಳ್ಳತನದ ಆರೋಪಿಗಳಾದ ಮಣಿಕಂಠ, ಸುದರ್ಶನ, ಉಮೇಶ ಇವರುಗಳನ್ನು ವಶಕ್ಕೆ ತೆಗೆದುಕೊಂಡು ಅವರ ತಪಾಸಣೆ ಮಾಡಿದಾಗ ಅವರ ಬಳಿ ಸಿಕ್ಕಿದ ಚಿನ್ನಭರಣಗಳನ್ನು ಪಂಚರ ಸಮಕ್ಷಮ ಪಂಚನಾಮೆ ಮುಖೇನ ವಶಕ್ಕೆ ಪಡೆದುಕೊಂಡಿರುತ್ತೇನೆ. ಕೃತ್ಯ ಸ್ಥಳದ ಆಧಾರದ ಮೇರೆಗೆ ಬರ್ಕೆ ಪೊಲೀಸ್ ಠಾಣೆಗೆ ತೆರಳಿ ಮೊಕದ್ದಮೆ ನಂ 86/2005 ರಂತೆ ಪ್ರಕರಣ ದಾಖಲಿಸಿರುತ್ತೇನೆ. ನಂತರ ಪ್ರಕರಣದ ತನಿಖೆಯನ್ನು ಪುನಃ ಕೈಗೊಂಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ಸಿ.ಡಬ್ಲ್ಯು 1 ಪಿ.ಡಬ್ಲೂ :4

ಆರೋಪಿತರನ್ನು ವಿಚಾರಿಸಿ ಅವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತರಾದ ಮಣಿಕಂಠ, ಮುತ್ತಪ್ಪ ಸುದರ್ಶನ ಮತ್ತು ಉಮೇಶ್ ರವರು ತಮ್ಮ ಸ್ವಕುಷಿ ಹೇಳಿಕೆಯಲ್ಲಿ ತಮ್ಮೊಂದಿಗೆ ಬಂದಲ್ಲಿ ಕೃತ್ಯ ನಡೆದ ಸ್ಥಳವನ್ನು ತೋರಿಸಿಕೊಡುವುದಾಗಿ ಹೇಳಿರುತ್ತಾರೆ. ನಂತರ ಸುದರ್ಶನ ಮತ್ತು ಮಣಿಕಂಠ ರವರು ಹೇಳಿದ ಹೇಳಿಕೆಯ ಆದಾರದ ಮೇರೆಗೆ ನಾನು ಮತ್ತು ನನ್ನ ಸಿಬ್ಬಂದಿಗಳು ಮತ್ತು ಪಂಚರೊಂದಿಗೆ ಆಗುಂಬೆ ಬಳಿಯ ಬಿದಿರುಗೋಡೆ ಎಂಬಲ್ಲಿಯ ಉಷಾ ಜ್ಯುವೆಲ್ಲರಿ ಎಂಬ ಅಂಗಡಿಯ ಬಳಿ ಕರೆದುಕೊಂಡು ಹೋಗಿರುತ್ತಾರೆ. ಅಂಗಡಿಯಲ್ಲಿ ಪ್ರಕಾಶ ಆಚಾರ್ಯ ರವರನ್ನು ತೋರಿಸಿ ಇವರ ಬಳಿ ತಾವು ಕಳ್ಳತನ ಮಾಡಿದ ಆಭರಣಗಳನ್ನು ಕೊಟ್ಟಿರುವುದಾಗಿ ತಿಳಿಸಿರುತ್ತಾರೆ. ಪ್ರಕಾಶ ಆಚಾರ್ಯವರವನ್ನು ವಿಚಾರಿಸಲಾಗಿ ಆತನು ಆರೋಪಿತರು ನನಗೆ ಒಂದು ವರುಷದ ಹಿಂದೆ ಮಾರಾಟ ಮಾಡಿದ್ದ ಚಿನ್ನಾಭಾರಣಗಳು ಎಂದು ಹೇಳಿ ಚಿನ್ನಾಭರಣಗಳನ್ನು ಹಾಜರು ಪಡಿಸಿದ್ದು ಒಟ್ಟು 14 ಚಿನ್ನಾಭರಣಗಳಿದ್ದವು. ಅವುಗಳನ್ನು ಮಹಜರು ಮುಖೇನ ವಶಪಡಿಸಿಕೊಂಡಿರುತ್ತೇನೆ. ಈ ಸ್ವತ್ತುಗಳಲ್ಲಿ ಕ್ರಮ ಸಂಖ್ಯೆ 8 ರಿಂದ 14 ರವರೆಗಿನ ಚಿನ್ನಾಭರಣಗಳು ಈ ಪ್ರಕರಣಕ್ಕೆ ಸಂಬಂದಪಟ್ಟವುಗಳಾಗಿದೆ. ಪ್ರಕಾಶ ಆಚಾರ್ಯರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಆರೋಪಿ ಹಾಗೂ ಚಿನ್ನಾಭಾರಣಗಳೊಂದಿಗೆ ಠಾಣೆಗೆ ಹಿಂದುರುಗಿರುತ್ತೇನೆ. ಮಣಿಕಂಠ ಆರೋಪಿಯ ಸ್ವಕುಷಿ ಹೇಳಿಕೆಯ ದೃಡೀಕೃತ ಪ್ರತಿಯನ್ನು ನಿಪಿ 5 ಎಂದು ಗುರುತಿಸಲಾಯಿತು. ಮಹಜರಿನ ದೃಡೀಕೃತ ಪ್ರತಿಯನ್ನು ನಿಪಿ 6 ಎಂದು ಗುರುತಿಸಲಾಯಿತು. ನಂತರ ಸಾಕ್ಷಿದಾರರಾದ ಶ್ರೀಧರ್ ಅಂಚನ್ ಹಾಗೂ ಅಚ್ಚುತ ಶೆಣೈ ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಆರೋಪಿತರನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ಸಿ.ಡಬ್ಲ್ಯು 1 ಪಿ.ಡಬ್ಲೂ :4

ನಾನು ಈ ಪರಕರಣಕ್ಕೆ ಸಂಬಂದಪಟ್ಟ ದಾಖಲೆಗಳನ್ನು ಹಾಗೂ ಮುದ್ದೆಮಾಲುಗಳನ್ನು ವರದಿಯೊಂದಿಗೆ ಮಾನ್ಯ ನ್ಯಾಯಾಲಯದ ಅನುಮತಿ ಪಡೆದುಕೊಂಡು ದಿಃ 23-08-2005 ರಂದು ಪಡುಬಿದ್ರಿ ಪೊಲೀಸ್ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಆ ದಿನ ವಶಪಡಿಸಿಕೊಂಡ ಆರೋಪಿಗಳ ಪೈಕಿ ಮಣಿಕಂಠರವರನ್ನು ನ್ಯಾಯಾಲಯ ದಲ್ಲಿ ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ಬಿ. ಎಸ್ ಜಿ ವಕೀಲರಿಂದಃ

ಈ ಕೇಸಿಗೆ ಸಂಬಂದಪಟ್ಟ ತನಿಖಾಧಿಕಾರಿಗಳು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿದಾರರಿಂದ ಈ ಕೇಸಿಗೆ ಸಂಬಂದಪಟ್ಟ ಪ್ರತ್ಯೇಕವಾದ ಹೇಳಿಕೆ ಪಡೆದುಕೊಂಡಿಲ್ಲ. ಸ್ಥಳದಲ್ಲಿ ಯೇ ನಾನು ಪಂಚರಿಗೆ ಸಹಕರಿಸಿಕೊಂಡಿರುತ್ತೇನೆ. ಆರೋಪಿ ಬಂದನದ ಳುವಯದಲ್ಲಿ ಅವರಿಂದ ಚಿನ್ನ ವಶಪಡಿಸಿಕೊಳ್ಳುವ ಸಮಯದಲ್ಲಿ ಅಕ್ಕಸಾಲಿಗರನ್ನು ಬರಮಾಡಿಕೊಂಡು ಈ ಆಭರಣಗಳು ಚಿನ್ನವೇ ಎಂದು ಪರಿಶೀಲಿಸಿರುತ್ತೇನೆ. ಅಕ್ಕಸಾಲಿಗರವರ ಹೆಸರು ವಿಲಾಸ್ ಪಾಟೀಲ್ ಎಂದು ಆಗಿರುತ್ತದೆ. ದಸ್ತಗಿರಿ ಸಮಯದಲಿಲ ವಶಪಡಿಸಿಕೊಂಡ ಆಭರಣಗಳು ಈ ಕೇಸಿಗೆ ಸಂಬಂದಪಟ್ಟಿರುವುದಿಲ್ಲ. ಸದ್ರಿ ಚಿನ್ನಾಭರಣ ಕ್ಯಾಶ್ ಕೌಂಟರ್ ನ ಕೆಳಗೆ ಒಂದು ಕಪಾಟಿನಲ್ಲಿ ಇತ್ತು. ಅದು ಯಾವುದರಲ್ಲಿ ಇತ್ತು ಎಂದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಪಿರ್ಯಾದಿದಾರರಿಗೆ ಸ್ಥಳಕ್ಕೆ ಕರೆಸಿರುವುದಿಲ್ಲ ಏಕೆಂದರೆ ಸಮಯಾವಕಾಶ ಇರಲಿಲ್ಲ. ಸ್ಥಳ ದಲ್ಲಿ ಬೇರೆ ಯಾರು ಲಭ್ಯ ಇರಲಿಲ್ಲ. ಸದ್ರಿ ಆರೋಪಿತರನ್ನು ನಾನು ದಸ್ತಗಿರಿ ಮಾಡಿಲ್ಲ ಮತ್ತು ಅವರನ್ನು ಈ ಕೇಸಿಗೆ ಸಂಬಂದಪಟ್ಟು ನಾನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ . ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ಸಿ.ಡಬ್ಲ್ಯ್ಯು 1 ಪಿ.ಡಬ್ಲ್ಯೂ :4

ಮರು ವಿಚಾರಣೆಃ ಇಲ್ಲ.

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ ಮತ್ತು ಎಸಿಜೆಎಂ ಉಡುಪಿ.